ಮಹಾರಾಜರೇ ಎಂದು ವಿಷ್ಣುಶರ್ಮ ಹೇಳಿದ. ಬ್ರಹ್ಮದತ್ತನು ಬರದೇ ಇರುವ ಯೋಚನೆಯಲ್ಲಿದ್ದ ಮಹಾರಾಜರು ಸರಿ, ಇವರು ಎತ್ತ ಹೋದರೂ ಯಾರೂ ಅಡ್ಡಿಪಡಿಸಬೇಡಿ, ನಿಮಗೆ ಅನುಮತಿಯಿದೆ ನೀವಿನ್ನು ಅರಮನೆಯನ್ನು ನೋಡಿ ಎಂದು ಹೇಳಿದರು.

ವಿಷ್ಣುಶರ್ಮನು ನೇರವಾಗಿ ಸೈನ್ಯದ ಗುಪ್ತಚರ ಕೋಣೆಯ ಕಡೆಗೆ ಹೋದ, ರಾಜಾಜ್ಞೆಯಿದೆ ಯಾರೂ ಅಡ್ಡಿಪಡಿಸುವಂತಿಲ್ಲ. ಆ ಕೋಣೆಯ ಒಳಗಡೆ ರಾಜಭಟರಿಗೂ ಅನುಮತಿಯಿಲ್ಲ. ನೇರವಾಗಿ ಒಳಹೋದ ವಿಷ್ಣುಶರ್ಮನು ಏನೋ ಹುಡುಕಾಡ ತೊಡಗಿದನು.ಅಷ್ಟರಲ್ಲಿ ಹಿಂದಿನಿಂದ ಯಾರೋ ಬಂದ ಅನುಭವವಾಯಿತು, ನೋಡಿದರೆ ಬ್ರಹ್ಮಗುಪ್ತ ಸೈನಿಕರ ಸಮೇತ ಬಂದಿದ್ದಾನೆ.ವಿಷ್ಣುಶರ್ಮನನ್ನು ಬಂಧಿಸಿ ರಾಜಸಭೆಗೆ ಕರೆತಂದ.ಇದು ಅನ್ಯಾಯ ಸ್ಪರ್ಧೆಯಲ್ಲಿ ನೀನು ಸೋತಿದ್ದಿಯಾ, ನನ್ನ ಹಿಂದೆ ಬರಬಾರದಿತ್ತು ಎಂದು ಹೇಳತೊಡಗಿದ.ಮಹಾರಾಜರೇ ದಯವಿಟ್ಟು, ನನ್ನ ಜೊತೆಗೆ ಅರಮನೆಯ ಹೊರಬನ್ನಿ ಎಂದು ಬ್ರಹ್ಮದತ್ತನು ವಿಷ್ಣುಶರ್ಮನನ್ನೂ ಜೊತೆಗೆ ಕರೆದುಕೊಂಡು ಅರಮನೆಯ ಹೊರಗಡೆಗೆ ಬಂದ.ಮಹಾರಾಜರ ಜೊತೆಗೆ ಸಭೆಯೇ ಬಂತು. ವಿಷ್ಣುಶರ್ಮ ನೀನು ಕೊಟ್ಟ ಸಮಯ ಇನ್ನೂ ಮುಗಿದಿಲ್ಲ, ನಿನ್ನೆ ನೀನು ಕೇಳಿದ ಪ್ರಶ್ನೆಗೆ ಉತ್ತರ ಅದೋ ನೋಡು ಎಂದು ಆಕಾಶದ ಕಡೆ ತೋರಿಸಿದ.ಆಗಷ್ಟೇ ಮಳೆ ಕಡಿಮೆಯಾಗಿ, ಹೊಂಬಿಸಿಲಿತ್ತು. ಆಕಾಶದಲ್ಲಿ ವರ್ಣರಂಜಿತವಾದ ಕಾಮನಬಿಲ್ಲು ಮೂಡಿತ್ತು. ಕುಂಚಬಿಡಿಸದ ಕೈಗೆಸಿಗದ ಕಂಡುಮರೆಯಾಗುವ ಚಿತ್ರಕಲೆಯೇ ಆ ಕಾಮನಬಿಲ್ಲು ಎಂದು ಉತ್ತರಿಸಿದ. ಎಲ್ಲರೂ ಚಪ್ಪಾಳೆ ತಟ್ಟಿದರು.

ಹೌದೂ... ಇದಕ್ಕೆ ಉತ್ತರ ನಿನ್ನೆಯೇ ನೀಡಬಹುದಿತ್ತಲ್ಲಾ ಒಂದು ದಿನ ಸಮಯ ಯಾಕೆ ಕೇಳಿದೆ ಎಂದು ಮಹಾರಾಜರು ಕೇಳಿದರು. ನನಗೆ ಈ ವಿಷ್ಣುಶರ್ಮನನ್ನು ಮೊದಲಸಲ ನೋಡಿದಾಗಲೇ ಅನುಮಾನ ಬಂದಿತ್ತು ಮಹಾರಾಜ, ಪಂಡಿತನಿಗಿರುವ ಯಾವ ಲಕ್ಷಣಗಳೂ ಇವನಲ್ಲಿ ನನಗೆ ಕಾಣಲಿಲ್ಲ, ಇವನು ತನ್ನ ಜೊತೆ ಆಯುಧಗಳನ್ನೂ ತಂದಿದ್ದ. ನಮ್ಮ ರಾಜ್ಯದ ಸೈನ್ಯದ ಬಗೆಗಿನ ಗುಪ್ತಚರ ಮಾಹಿತಿಯನ್ನು ಕದಿಯಲು ಬಂದಿದ್ದ. ಅದರ ಸಲುವಾಗಿಯೇ ಅರಮನೆಯನ್ನು ಸುತ್ತಿನೋಡುವ ಆಸೆಯನ್ನು ಹೇಳಿಕೊಂಡ. ನಿನ್ನೆಯ ಒಂದು ದಿನದಲ್ಲಿ ಪಕ್ಕರಾಜ್ಯದಲ್ಲಿ ಇಂತಹ ಪಂಡಿತನು ಇರುವನೇ ಎಂದು ನಾನು ವಿಚಾರಿಸಿದ್ದೇನೆ ಮಹಾರಾಜ, ಅಲ್ಲಿ ಈ ಹೆಸರಿನಿಂದ ಯಾರೂ ಇಲ್ಲ. ನನ್ನ ಅನುಮಾನವನ್ನು ಬಗೆಹರಿಸಿಕೊಳ್ಳಲು, ಗುಪ್ತಚರ ಕೋಣೆಯಲ್ಲಿ ಅಡಗಿಕುಳಿತಿದ್ದೆ. ನನ್ನ ಅನುಮಾನವೇ ನಿಜವಾಯಿತು. ಇವನು ಸಾಕ್ಷಿ ಸಮೇತ ತನ್ನ ಪ್ರಶ್ನೆಗೆ ಉತ್ತರಿಸು ಎಂದು ಹೇಳಿದ್ದ, ಆ ಪ್ರಕೃತಿಯೇ ನನಗೆ ಸಹಕರಿಸಿತು. ನಾನು ಸ್ಪರ್ಧೆಯಲ್ಲೂ ಗೆದ್ದಂತಾಯಿತು ಎಂದು ಹೇಳಿದ.

ವಿಷ್ಣುಶರ್ಮನು ತನ್ನ ನಿಜನಾಮವನ್ನು,ವಿವರಗಳನ್ನು ಹೇಳಿ ಮಹಾರಾಜರ ಕಾಲಿಗೆ ಬಿದ್ದನು. ನಿಮ್ಮ ಮಾತಿನ ಪ್ರಕಾರ ನನಗೆ ಏನು ಬೇಕಾದರೂ ಶಿಕ್ಷೆಕೊಡಿ ಎಂದು ಕೇಳಿಕೊಂಡನು. ಕ್ಷಮಿಸಿಬಿಡುತ್ತಿದ್ದೇನೆ ಹೋಗು, ಮತ್ತೆಂದೂ ಈ ರೀತಿ ಕುತಂತ್ರ ಮಾಡಲು ಹೋಗಬೇಡಿರೆಂದು ಅವನಿಗೂ ಅವನ ರಾಜ್ಯಕ್ಕೂ ಮಹಾರಾಜರು ಎಚ್ಚರಿಕೆ ನೀಡಿದರು. ತನ್ನ ಚಾಣಾಕ್ಷತನವನ್ನು ಮತ್ತೊಮ್ಮೆ ನಿರೂಪಿಸಿದ ಬ್ರಹ್ಮದತ್ತನನ್ನು ಕೊಂಡಾಡಿದರು. ■



ಶಶಿಧರ ಹಳೇಮನಿ

# ಕಾಡಿನ ಬದುಕು

■ ಸ. ಗಿರಿಜಾಶಂಕರ, ಚಿಕ್ಕಮಗಳೂರು

ಹುಲಿಯೊಂದು ಕ್ರೂರ ಮೃಗ
ಕಾಡಿನಿಂದದ ಓಡಿಸಬೇಕಮ್ಮ
ಹೇಳುವೆ ಕೇಳು ನನ್ನ ಪುಟಾಣಿ
ಕ್ರೂರವಲ್ಲ ಯಾವುದೇ ಪ್ರಾಣಿ

ಹುಲಿ ಇರಲು ಕಾಡಿರಬೇಕು
ಕಾಡುಳಿಯಲು ಹುಲಿ ಇರಬೇಕು
ಹುಲಿಕಾಡು ಇದ್ದರೆ ಎರಡೂ
ಭೂಮಿಯಾಗದು ಎಂದೂ ಬರಡು

ಹಸಿರು ತಿಂದು ಬದುಕುವ ಜಿಂಕೆ
ಜಿಂಕೆ ಸಂಖ್ಯೆಗೆ ಹುಲಿಯದೆ ಅಂಕೆ
ಹಸಿರು ತಿನ್ನುವ ಪ್ರಾಣಿಯ ಸಂಖ್ಯೆ
ಮಿತಿಮೀರಿದರೆ ತಪ್ಪುವುದಂಕೆ

ವಾರಕ್ಕೊಂದು ಸಸ್ಯಾಹಾರಿ
ಹಸಿದರೆ ಮತ್ತೆ ಬೇಟೆ ಸವಾರಿ
ಕೂಡಿಡುವುದನವ ಕಲಿತೇ ಇಲ್ಲ
ಮನುಷ್ಯ ಮಾತ್ರ ಇದ ಬಿಟ್ಟಿಲ್ಲ

ಹಸಿರು ತಿಂದರೆ ಜಿಂಕೆಗೆ ಬದುಕು
ಹುಲಿ ಬದುಕಲು ಜಿಂಕೆ ಬೇಕು
ಮೃತ ಭಕ್ಷಕಗಳಿಗದು ಬಿಟ್ಟಿದ್ದು
ಸೂಕ್ಷ್ಮಜೀವಿಗಳಿಗಿನ್ನುಳಿದದ್ದು

ಒಮ್ಮೆ ಕಾಡಿನ ಒಳಹೊಕ್ಕು ಕೆದಕು
ಅಲ್ಲಿದೆ ನೋಡು ಅವಲಂಬಿತ ಬದುಕು
ಕಾಡಿನ ಜೀವಿಯ ಬದುಕೇ ಚೆಂದ
ನಿಸರ್ಗ ಸರಪಳಿ ಹೀಗಿದೆ ಕಂದ

■